Our Agriculture Minister has totally forgotten that. ಆದ್ದರಿಂದ KGF ನಲ್ಲಿ ಏಕೆ ಮಾಡಿಲ್ಲ? ಸುಮಾರು 50 ಲಕ್ಷ ಅಥವಾ 1 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿ ನಮ್ಮಲ್ಲಿ ಗಿಡಗಳನ್ನೆಲ್ಲಾ ಬೆಳೆಸಿದರೆ, KGF environment ಬಹಳ ಚೆನ್ನಾಗಿರುತ್ತದೆ. ತಾವು ಅದರ ಬಗ್ಗೆ ಏನು ಹೇಳುತ್ತೀರಿ?

ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಅಧ್ಯಕ್ಷರೆ, 2003–04ನೇ ಸಾಲಿನಲ್ಲಿ KGF ಗೆ ಹಣ ಬಿಡುಗಡೆ ಮಾಡುವುದಕ್ಕಾಗಿಲ್ಲ, ಆಗ ಮಾಡಿರಲಿಲ್ಲ. 2004–05ನೇ ಸಾಲಿನಲ್ಲಿ 23.5 ಎಕರೆಯಲ್ಲಿ 12025 ಸಸಿಗಳನ್ನು ಈಗಾಗಲೇ ನೆಟ್ಟಿದ್ದೇವೆ. 2004–05ನೇ ಸಾಲಿನ ನಂತರ DPAP ಯೋಜನೆಯಲ್ಲಿ 1 ಲಕ್ಷದ 38 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ನೆಡು ತೋಪುಗಳನ್ನು ಮಾಡತಕ್ಕಂಥ ಸಮಯದಲ್ಲಿ ಅಲ್ಲಿ ಯಾವ ಗ್ರಾಮ ಸಮಿತಿಯವರು ಅಥವಾ ಬೇರೆಯವರ್ಯಾರೂ ಹೆಚ್ಚಿಗೆ ಮುಂದೆ ಬಂದು ಕೇಳಿಲ್ಲ. ಆದರೂ BGML ನವರು ನಮ್ಮ ಅಧಿಕಾರಿಗಳನ್ನು ಅಲ್ಲಿಗೆ deputation ಮೇಲೆ ತೆಗೆದುಕೊಂಡು ಹೆಚ್ಚಿಗೆ ಅಫಾರೆಸ್ಟೇಷನ್ ಮಾಡಬೇಕೆಂದು ಈಗಾಗಲೇ ಅಲ್ಲಿ ಸಸಿಗಳನ್ನು ಹಾಕಿದ್ದಾರೆ. ಈ ವರ್ಷ ತಾವು ಈ ಪ್ರಶ್ನೆ ಕೇಳುವುದಕ್ಕೆ ಮುಂಚಿತವಾಗಿಯೇ ನಾವು DFO ರವರನ್ನು ಅಲ್ಲಿಗೆ ಕಳುಹಿಸಿಕೊಟ್ಟಿದ್ದೇವೆ. DFO ರವರು TP ಯಿಂದ 1 ಲಕ್ಷದ 23 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ, ಪಂಚಾಯಿತಿಯಿಂದ 60 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ, ZP ಯಿಂದ 63,100 ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇಷ್ಟೆಲ್ಲಾ ಮಾಡಿದ್ದರೂ ಇನ್ನೂ ಅನೇಕ ಕಡೆ ಮಾಡುವಂತೆ ನೀವು DFP ಗೆ ಲೆಟರ್ ಕೊಟ್ಟಿದ್ದೀರಿ. ನೀವು ಹೇಳಿದಂತೆ ಜೂನ್, ಜುಲೈ, ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳೊಳಗಾಗಿ ಎಲ್ಲಾ ಕಡೆ ಸಸಿಗಳನ್ನು ನೆಡುವಂತಹ ಕೆಲಸವನ್ನು ನಮ್ಮ ಇಲಾಖೆ ಮಾಡುತ್ತದೆ.

ರಾಜ್ಯದ ಅರಣ್ಯ ಪ್ರದೇಶ ನಾಶವಾಗುತ್ತಿರುವುದು

129 (553) Sri Patil S. S. (Mundaragi) : Will the Minister for Forest, Ecology and Environment be pleased to state :

a) What is the extent of Forest area in the State;

b) How much Forest is being destroyed every year;

c) What are the steps taken by the Government to protect the Forest which is being destroyed?

Sri C. Chennigappa (Minister for Forest, Ecology and Environment) :

a) 38,28,430 ha.

b) Prior to 1978 the Government of India has regularized encroachment in Forest area to an extent of 14,848 ha.

After the Forest Conservation Act coming into force, from 1980 till date an extent of 36,423 ha. of forest land hae been diverted for various developmental activities after obtaining Central Government approval.

c) The following activities are taken up for protection of Forests.

1. Creation of new fire lines, maintenance of old fire lines and employing temporary fire watchers for preventing fire incidences in fire prone areas. Financial assistance is also provided to Village Forest Committees to involve local people in forest protection.
2. Strengthening of wireless network and replacement of old vehicles by new ones, is being underataken for improved communication, to deal with forest offence cases promptly.
3. Steps are being taken by the department to fill up the vacancies in the cadre of guards and foresters by direct recruitment.
4. A number of check posts have been established in sensitive areas and inter state borders to check illicit transit of forest produce.
5. There are 21 Forest Mobile Squads in the state. These are engaged in patrolling the areas to check any illegal activity related to Forest.
6. Anti poaching camps have been set up in sensitive forest areas under both territorial and wild life wings.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ರಾಜ್ಯದಲ್ಲಿರುವ ಅರಣ್ಯ ಪ್ರದೇಶ ಎಷ್ಟು ಎಂದು ನಾನು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಉತ್ತರ ಕೊಟ್ಟಿದ್ದಾರೆ. ಪ್ರತಿ ವರ್ಷ ಎಷ್ಟು ಪ್ರಮಾಣದ ಅರಣ್ಯ ನಾಶವಾಗುತ್ತದೆ ಎಂಬ ನನ್ನ ಪ್ರಶ್ನೆಗೆ ನಿಮ್ಮ ಅಧಿಕಾರಿಗಳು 1978ರ ಪೂರ್ವದಲ್ಲಿ ಆಗಿರುವ ಅತಿಕ್ರಮಣ ಪ್ರಕರಣವನ್ನು ಭಾರತ ಸರ್ಕಾರದಿಂದ ಅನುಮತಿ ಪಡೆದು 14,804 ಹೆಕ್ಟೇರ್ ಪ್ರದೇಶವನ್ನು ಸಕ್ರಮಗೊಳಿಸಲಾಗಿರುತ್ತದೆ, ಅರಣ್ಯ ಅಧಿನಿಯಮ,

1980 ಜಾರಿಗೆ ಬಂದ ನಂತರ ಇಲ್ಲಿಯವರೆಗೂ 36,433 ಹೆಕ್ಟೇರ್‌ಗಳಷ್ಟು ಅರಣ್ಯ ಪ್ರದೇಶವನ್ನು ವಿವಿಧ ಅಭಿವೃದ್ಧಿ ಯೋಜನೆಗಳಿಗಾಗಿ ಕೇಂದ್ರ ಸರ್ಕಾರದ ಅನುಮೋದನೆ ಪಡೆದು ಮಂಜೂರಾತಿ ಮಾಡಲಾಗಿದೆ ಎಂದು ಉತ್ತರಿಸುತ್ತಾರೆ. ಇದು ಉತ್ತರವೇ? ಎಷ್ಟು ಪ್ರಮಾಣದ ಅರಣ್ಯ ನಾಶವಾಗುತ್ತದೆ ಎಂದು ನಾನು ಕೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ಒಂದು ಅಂದಾಜಿನ ಪ್ರಕಾರ ವಿಶ್ವದಲ್ಲಿ ಪ್ರತಿ ವರ್ಷ 3% ಅರಣ್ಯ ನಾಶವಾಗುತ್ತಿದೆ. ಆ ಪ್ರಮಾಣ ಇಲ್ಲಿ ಎಷ್ಟು ನಾಶವಾಗುತ್ತಿದೆ ಎಂದು ನಾನು ಕೇಳಿದ್ದೇನೆ. ಅದಕ್ಕೆ ನಿಮ್ಮಿಂದ ಉತ್ತರವೇ ಬಂದಿಲ್ಲ. ನಿಮ್ಮಲ್ಲಿ ಆ ಬಗ್ಗೆ ಹೆಚ್ಚುವರಿ ಮಾಹಿತಿ ಏನಾದರೂ ಇದ್ದರೆ ಹೇಳಿ. ಅರಣ್ಯ ನಾಶವಾಗುವುದನ್ನು ಮತ್ತೆ ತುಂಬಿ ಕೊಡಲಿಕ್ಕೆ ತಾವು ಏನೇನು ಕ್ರಮಗಳನ್ನು ಕೈಗೊಂಡಿದ್ದೀರಿ ಎಂಬುದನ್ನು ಹೇಳಬೇಕು. ಅರಣ್ಯ ರಕ್ಷಣೆಗೆ ಏನೇನು ಕ್ರಮ ಕೈಗೊಳ್ಳುತ್ತಿದ್ದೀರಿ ಎಂಬುದನ್ನು ತಾವು ಮೂರನೇ ಪ್ರಶ್ನೆಗೆ ಉತ್ತರವಾಗಿ ಹೇಳಿದ್ದೀರಿ. ಅದರಲ್ಲಿ ಗ್ರಾಮ ಅರಣ್ಯ ಸಮಿತಿಗಳಿವೆ ಎಂದು ಹೇಳಿದ್ದೀರಿ. ನಿಮ್ಮ ಆ ಸಮಿತಿಗಳು ಎಲ್ಲಿವೆ? ಅವು ಎಲ್ಲೆಲ್ಲಿ ಕೆಲಸ ಮಾಡುತ್ತಿವೆ? ಅವರಿಗೆ ಹಣ ಬಿಡುಗಡೆ ಮಾಡಲಾಗುತ್ತಿದೆ ಎಂದು ಹೇಳುತ್ತೀರಿ? ಅವರಿಗೆ ಏತಕ್ಕಾಗಿ ಹಣ ಬಿಡುಗಡೆ ಮಾಡಲಾಗುತ್ತಿದೆ? ಅವರು ಏತಕ್ಕಾಗಿಯೋ ಹಣವನ್ನು ತೆಗೆದುಕೊಂಡು ಸುಮ್ಮನೆ ಇಟ್ಟುಕೊಂಡು ಕುಳಿತಿರುತ್ತಾರೆ. ಗ್ರಾಮ ಅರಣ್ಯ ಸಮಿತಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಈ ಸಮಿತಿಗಳನ್ನು ಚುರುಕುಗೊಳಿಸಲಿಕ್ಕೆ ಏನೇನು ಕ್ರಮಗಳನ್ನು ಕೈಗೊಳ್ಳುತ್ತೀರಿ? ಪ್ರತಿ ವರ್ಷ ಎಷ್ಟು ಅರಣ್ಯ ನಾಶವಾಗುತ್ತಿದೆ? ಅರಣ್ಯ ನಾಶವಾದರೆ, ನಾಶವಾದಂತಹ ಅರಣ್ಯವನ್ನು ತುಂಬಿಕೊಳ್ಳಲಿಕ್ಕೆ ಏನೇನು ಕ್ರಮಗಳನ್ನು ಕೈಗೊಂಡಿದ್ದೀರಿ ಎಂಬುದನ್ನೂ ಕೂಡ ನಮಗೆ ಮಾನ್ಯ ಸಚಿವರು ಹೇಳಬೇಕು. ಅರಣ್ಯದಲ್ಲಿ ಗಿಡಗಳನ್ನು ನೆಡುವ ಬಗ್ಗೆ ಅಧ್ಯಯನ ವರದಿಯೊಂದರಲ್ಲಿ ಹೇಳಲಾಗಿರುವ ಬಗ್ಗೆ ಮಾನ್ಯ ಸಚಿವರು ದಯವಿಟ್ಟು ಲಕ್ಷ್ಯ ವಹಿಸಬೇಕೆಂದು ಕೋರುತ್ತೇನೆ. ಅರಣ್ಯೀಕರಣದಿಂದ ಅಡ್ಡ ಪರಿಣಾಮ–ಎಂಬ ಅಧ್ಯಯನ ವರದಿಯಲ್ಲಿ ಇದರ ಬಗ್ಗೆ ಹೇಳಲಾಗಿದೆ. ಸುಮ್ಮನೆ ಯಾವುದೋ ಒಂದು ಗಿಡವನ್ನು ತೆಗೆದುಕೊಂಡು ಹೋಗಿ ನೆಡುವುದಲ್ಲ. New York ದ್ದು ಕಾಡು ಬೆಳೆಸಿ, ನಾಡು ಉಳಿಸಿ ಎಂಬ ಏರು ಧ್ವನಿಯ ಘೋಷಣೆಯನ್ನು ತಗ್ಗಿಸುವ ಈ ಸುದ್ದಿ ನ್ಯೂಯಾರ್ಕ್‌ನಿಂದ ವರದಿಯಾಗಿದೆ. "ಅರಣ್ಯೀಕರಣದಿಂದ ಭೂಮಿಯಲ್ಲಿರುವ ಇಂಗಾಲದ ಡೈ ಆಕ್ಸೈಡ್ ಪ್ರಮಾಣವೇನೋ ಕಡಿಮೆಯಾಗುತ್ತದೆ. ಆದರೆ ಇದೇ ವೇಳೆ ಹೆಚ್ಚೆಚ್ಚು ಅರಣ್ಯ ಬೆಳೆಸುವುದರಿಂದ ನದಿಗಳು ಒಣಗುತ್ತವೆ, ಭೂಮಿಯ ಲವಣತೆ ಹೆಚ್ಚುತ್ತದೆ" ಎಂದು ನೇಚರ್ ನಿಯತಕಾಲಿಕೆ ಅಧ್ಯಯನ ವರದಿಯಲ್ಲಿ ಹೇಳಲಾಗಿದೆ. "ಭೂಮಿಯ ಮೇಲಿನ ಇಂಗಾಲದ ಡೈ ಆಕ್ಸೈಡ್‌ನ ನಿಯಂತ್ರಣಕ್ಕೆಂದೇ ಬೆಳೆಸಿರುವ ತೀವ್ರಗತಿಯಲ್ಲಿ ಬೆಳೆಯುವ ಮರಗಳಿಗೆ ಹೆಚ್ಚು ನೀರು ಬೇಕು, ಹೀಗಾಗಿ ತಾವು ಅಧ್ಯಯನ ನಡೆಸಿದ ಹಲವಾರು ಪ್ರದೇಶಗಳಲ್ಲಿ ಈ ಅರಣ್ಯಗಳಿಂದಾಗಿ ನದಿಗಳೇ ಒಣಗಿ ಹೋಗಿದ್ದು ಪತ್ತೆಯಾಗಿದೆ ಎಂದು ತಜ್ಞ ರಾಬರ್ಟ್ ಜಾಕ್ಸನ್ ವಿವರಣೆ ನೀಡುತ್ತಾರೆ". ಇದು ತಮ್ಮ ಗಮನಕ್ಕೆ ಬಂದಿದೆಯೇ? ಯಾವ್ಯಾವ ಮರಗಳನ್ನು ಬೆಳೆಸುವುದರಿಂದ ಇವತ್ತು ಈ ತರಹ ಭೂಮಿಯಲ್ಲಿರುವ ನೀರು

ಹೋಗುತ್ತದೆ ಅಥವಾ ನದಿಗಳು ಒಣಗುತ್ತವೆ ಎಂಬುದು ನಿಮಗೆ ಗೊತ್ತಿದೆಯೇ? ಅಂತಹ ಮರಗಳು ಯಾವುವು ನಿಮ್ಮಲ್ಲಿ ಇವೆ ಎಂಬ ಬಗ್ಗೆ ಏನಾದರೂ ತಮ್ಮಲ್ಲಿ ಮಾಹಿತಿ ಇದ್ದರೆ ಹೇಳಬೇಕು. ಮರಗಳನ್ನು ಬೆಳೆಸುವಾಗ ತಾವು ಯಾವ ರೀತಿಯ ಮರಗಳಿಗೆ ಆದ್ಯತೆ ಕೊಡುತ್ತೀರಿ ಎಂಬುದನ್ನೂ ತಾವು ಹೇಳಬೇಕು.

ಶ್ರೀ ಸಿ. ಚೆನ್ನಿಗಪ್ಪ : ಸನ್ಮಾನ್ಯ ಅಧ್ಯಕ್ಷರೆ, ಅರಣ್ಯ (ಸಂರಕ್ಷಣೆ) ಅಧಿನಿಯಮ 1980ರ ಆಚೆಗೆ ಸುಮಾರು 36,463 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಕೇಂದ್ರ ಸರ್ಕಾರದ ಅನುಮೋದನೆ ಪಡೆದು ವಿವಿಧ ಯೋಜನೆಗಳಿಗೆ ನೀಡಲಾಗಿದೆ. ಕೇಂದ್ರ ಸರ್ಕಾರದವರು ಸ್ಟೇಟ್‌ಗೆ ಆರ್ಡರ್ ಕೊಟ್ಟು, ಸ್ಟೇಟ್ ಗೌರ್ನಮೆಂಟ್‌ನವರು ಅಷ್ಟನ್ನು ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಇವತ್ತು ಈಗಾಗಲೇ ಬಿಡುಗಡೆ ಮಾಡಿದೆ, ಅದಕ್ಕಿಂತ ಮುಂಚಿತವಾಗಿ 14,484 ಎಕರೆಗಳಷ್ಟನ್ನು, ಏನು 53 ಫಾರಂ ಹಾಕಿಕೊಂಡು ವ್ಯವಸಾಯವನ್ನು ಮಾಡುತ್ತಿದ್ದರು, ಅದನ್ನು ರಾಜ್ಯ ಸರ್ಕಾರವೇ ಸಕ್ರಮ ಮಾಡಿ ರೈತರಿಗೆ ಕೊಟ್ಟಿರತಕ್ಕ ಕೆಲಸ ಹಿಂದೆ ಆಗಿದೆ. ನಮ್ಮ ನಾಯಕರು ಕೇಳಿದ ಪ್ರಶ್ನೆಗೆ ಉತ್ತರ ಹೇಳಬೇಕಾದರೆ, ಒಂದು ಇಂಚು ಅರಣ್ಯ ಭೂಮಿಯನ್ನು ಬಿಡಬಾರದೆಂದು ಸುಪ್ರೀಂಕೋರ್ಟ್ ಆದೇಶ ಮಾಡಿದೆ. ಆ ಪ್ರಕಾರ ಇವತ್ತು ನಮ್ಮ ಇಲಾಖೆಯಲ್ಲಿ ಯಾವುದೇ ಜಮೀನನ್ನು ಸಾರ್ವಜನಿಕ ಕೆಲಸಕ್ಕೆ ಅಲ್ಲದೆ, ಅದನ್ನು ಮಂಜೂರು ಮಾಡಲು ಅವಕಾಶವಿಲ್ಲ ಎಂಬುದನ್ನು ನಾವು ಕಟ್ಟು ನಿಟ್ಟಾಗಿ ಪಾಲನೆ ಮಾಡುತ್ತಿದ್ದೇವೆ. ಆದರೂ ಕೂಡ ಹಿಂದೆ ಮಂಗಳೂರು, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳಲ್ಲಿ ಅನೇಕ ದೊಡ್ಡ ದೊಡ್ಡ ರೈತರು ಅಕ್ರಮವನ್ನು ಸಕ್ರಮ ಮಾಡಿಸಿದ್ದರು, ಅದನ್ನು ಅಳತೆ ಮಾಡಿಸಿ ಬಿಡಿಸುವಂತಹ ಕಾರ್ಯಕ್ರಮಗಳನ್ನು ಜಾಗ್ರತೆ ಮಾಡುತ್ತಿದ್ದೇವೆ. ಎಲ್ಲಾ ಕಡೆ ಅಳತೆ ಕಾರ್ಯಕ್ರಮವನ್ನು ನಡೆಸಿ ಸುಮಾರು ಎರಡು ಮುಕ್ಕಾಲು ಲಕ್ಷ ಹೆಕ್ಟೇರ್‌ನಷ್ಟು ಜಮೀನನ್ನು ಇವತ್ತು ಅರಣ್ಯಕ್ಕೋಸ್ಕರ ಈಗಾಗಲೇ ವಶ ಮಾಡಿಕೊಂಡಿದ್ದೇವೆ. Afforestation system ನಲ್ಲಿ – ಏನು ಮಾಡಿದ್ದೇವೆಂದರೆ, ಆ ಜಿಲ್ಲೆಯ ಜಿಲ್ಲಾಧಿಕಾರಿಗಳು Section 4(1) ನೋಟಿಫಿಕೇಷನ್ ಮಾಡುವ ಮುಖೇನ ಗೋಮಾಳ ಲ್ಯಾಂಡ್, ಸಿ ಅಂಡ್ ಡಿ ಲ್ಯಾಂಡ್ ಅನ್ನು ನಮ್ಮ ವಶಕ್ಕೆ ತೆಗೆದುಕೊಂಡು ಅಲ್ಲಿ ಅರಣ್ಯೀಕರಣ ಮಾಡುವ ವ್ಯವಸ್ಥೆ ಮಾಡಿದ್ದೇವೆ. ನಮ್ಮ ಹಿರಿಯ ನಾಯಕರು ಇವತ್ತು ಅರಣ್ಯ ಸಮಿತಿಗೆ ಹಣ ಕೊಟ್ಟಿಲ್ಲ, ಸಮಿತಿಯನ್ನು ಸರಿಯಾಗಿ ರಚನೆ ಮಾಡಿಲ್ಲವೆಂದು ಹೇಳಿದರು. ಹೌದು ಅರಣ್ಯ ಸಮಿತಿಗಳನ್ನು ಮಾಡುವ ವಿಚಾರದಲ್ಲಿ ನಮ್ಮಲ್ಲಿ ಸ್ವಲ್ಪ ವಿರುಪೇರಾಗಿತ್ತು, ಇವತ್ತು ಜೂನ್ ತಿಂಗಳಿನಿಂದ ಶುರು ಮಾಡಿದ್ದನ್ನು, ಡಿಸೆಂಬರ್ ಒಳಗಾಗಿ ಪ್ರತಿ ಗ್ರಾಮಪಂಚಾಯಿತಿ ಮಟ್ಟದಲ್ಲಿ ಅರಣ್ಯ ಸಮಿತಿಯನ್ನು ರಚನೆ ಮಾಡುವುದನ್ನು ಸರ್ಕಾರ ತೀಮಾನ ಮಾಡಿದೆ. ಅದೇ ರೀತಿಯಾಗಿ ಇವತ್ತು ಅರಣ್ಯ ಉಳಿಸುವುದಕ್ಕಾಗಿ ಸಂಚಾರಿದಳ, ವೈರ್‌ಲೆಸ್ ಕೊಡುವುದು, ಅವರಿಗೆ ಬಂದೂಕು ಕೊಡುವುದು, ಹೊಸದಾಗಿ ಗಾರ್ಡ್‌ಗಳನ್ನು ನೇಮಕಾತಿ ಮಾಡುವುದು ಬಾರ್ಡರ್ ಸೆಕ್ಯುರಿಟಿ ಮಾಡುವುದು, ಅವೆಲ್ಲವನ್ನೂ ಮಾಡಿಸಿ, ಏನು ಅರಣ್ಯದಲ್ಲಿ ಕಳ್ಳತನವಾಗುತ್ತಿತ್ತು, ವನ್ಯ ಜೀವಗಳ ಅಪರಣವಾಗುತ್ತಿತ್ತು

ಎಲ್ಲವನ್ನೂ ತಪ್ಪಿಸುವುದಕ್ಕೆ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ತಾವು ಹೇಳಿದಂತೆ ಓಜೋನ್ ಮೈನ್‌ಟೇನ್ ಮಾಡಬೇಕು, ಆಮ್ಲಜನಕವನ್ನು ಉಳಿಸಲು, ಮರಗಳನ್ನು ಬೆಳೆಸಬೇಕು. ಆ ಒಂದು ಉದ್ದೇಶದಿಂದ ನಮ್ಮ ಇಲಾಖೆ ಇವತ್ತು ಎಲ್ಲಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ತಾವು ಕೊಟ್ಟಿರುವ ಪ್ರಶ್ನೆಯಲ್ಲಿ ತಾವೇನು ಆದೇಶವನ್ನು ಮಾಡಿದ್ದೀರಿ, ಅಷ್ಟನ್ನು ಮಾಡುವಂತಹ ಪ್ರಯತ್ನವನ್ನು ಮಾಡುತ್ತೇವೆ, ಆ ಕೆಲಸವನ್ನು ಮಾಡುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಗೆ ಉತ್ತರ ನೀಡಲಿಲ್ಲ, ಎಷ್ಟು ಪ್ರಮಾಣದಲ್ಲಿ ಅರಣ್ಯ ನಾಶವಾಗುತ್ತಿದೆ ಎಂಬುದನ್ನು ಲೆಕ್ಕ ಮಾಡಿದ್ದೀರೇನು ಎಂಬ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ವಿಶ್ವದ ಅಂದಾಜಿನ ಪ್ರಕಾರ ಮೂರು ಪರ್ಸೆಂಟ್ ಅರಣ್ಯ ಪ್ರತಿ ವರ್ಷ ನಾಶವಾಗುತ್ತದೆ, ಇದೇ ರೀತಿಯಾಗಿ ಹೋದರೆ ಇನ್ನು 30–40 ವರ್ಷಗಳಲ್ಲಿ ಅರಣ್ಯವೇ ಇಲ್ಲದಂತಾಗುತ್ತದೆ, ಜನರೆಲ್ಲಾ ಉಸಿರುಗಟ್ಟಿ ಸಾಯುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆಂದು ಪರಿಸರತಜ್ಞರು ಹೇಳುತ್ತಿದ್ದಾರೆ, ಆ ರೀತಿಯಾಗಿ ನಮ್ಮ ರಾಜ್ಯದಲ್ಲಿ ಎಷ್ಟು ಪ್ರಮಾಣದಲ್ಲಿ ಪ್ರತಿ ವರ್ಷ ನಾಶವಾಗುತ್ತಿದೆ, ಇದು ನನಗೆ ಬೇಕಾಗಿದೆ. ಆ ಅಂಕಿ ಅಂಶಗಳು ತಮ್ಮಲ್ಲಿದೆಯಾ ಎಂಬುದನ್ನು ಹೇಳಬೇಕು, ನಾನು ಕೇಳಿರುವ ಪ್ರಶ್ನೆ ಅದು, ಅದನ್ನು ಬಿಟ್ಟು ನಿಮ್ಮವರು ಏನೇನೋ ಹೇಳಿದ್ದಾರೆ, ಅಂದರೆ ನಿಮ್ಮಲ್ಲಿ ಲೆಕ್ಕವೇ ಇಲ್ಲವೆಂದಾಯಿತು, ಎಷ್ಟು ನಾಶವಾಗುತ್ತದೆ, ಹಾಳಾಗುತ್ತದೆಂದು ಸುಮ್ಮನಿದ್ದೀರೇನು? ನಿಮ್ಮಲ್ಲಿ ಆ ಲೆಕ್ಕಾ ಇರಬೇಕಲ್ಲಾ? ಪ್ರತಿ ವರ್ಷ ಎಷ್ಟು ಪರ್ಸೆಂಟ್ ಅರಣ್ಯ ನಾಶವಾಗುತ್ತದೆಂದು ಉತ್ತರ ಹೇಳಿ.

ಶ್ರೀ ಬಸವರಾಜರಾಯರೆಡ್ಡಿ : ನಿಮ್ಮ ಹತ್ತಿರ ಉತ್ತರವಿಲ್ಲವೆಂದರೆ ದಯಮಾಡಿ. ಈ ಪ್ರಶ್ನೆಯನ್ನು ಪೆಂಡಿಂಗ್ ಇಡಿಸಿ, ಇದು ಬಹಳ ಮಹತ್ವವಾದ ಪ್ರಶ್ನೆ ಇದೆ, ಅಲ್ಲಿ ಉತ್ತರವೇ ಸರಿಯಿಲ್ಲ. ಉತ್ತರ ಸರಿಯಿಲ್ಲವೆಂದರೆ, ಪ್ರಶ್ನೆಯನ್ನು ಪೆಂಡಿಂಗ್ ಇಟ್ಟು ಉತ್ತರ ತರಿಸಿ.

ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಅಧ್ಯಕ್ಷರೆ, ಉತ್ತರ ಸರಿ ಇದೆ. ಎಷ್ಟು ಅರಣ್ಯ ನಾಶವಾಗಿದೆ ಎಂಬ ಪ್ರಶ್ನೆಗೆ, ನಿಖರವಾಗಿ, ಇವತ್ತು 51, 268 ಹೆಕ್ಟೇರ್ ಮಾತ್ರ ಹೋಗಿತ್ತು, ಅದು ಸೆಂಟ್ರಲ್ ಹಾಗೂ ರಾಜ್ಯ ಸರ್ಕಾರಗಳ ವಿವಿಧ ಕಾರ್ಯಕ್ರಮಗಳಿಗೆ ಹೋಗಿತ್ತು.....

ಶ್ರೀ ಎಸ್.ಎಸ್. ಪಾಟೀಲ್ : ಈಗ ಅರಣ್ಯ ನಾಶವಾಗುವುದಿಲ್ಲವೇನು? ಹಿಂದೆ ಎಷ್ಟು ಹೋಗಿತ್ತು ಅಷ್ಟೇ ಖರೆ, ಈಗ ಅರಣ್ಯ ನಾಶವೇ ಇಲ್ಲ?

ಶ್ರೀ ಸಿ. ಚೆನ್ನಿಗಪ್ಪ : ಅಂತಹದ್ದೇನೂ ವರದಿಯಾಗಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ನಿಮ್ಮಲ್ಲಿ ಅರಣ್ಯ ನಾಶವೇ ಇಲ್ಲ, ಇದೇ ಲೆಕ್ಕವನ್ನು ಮುಂದೆ ರಾಜ್ಯಕ್ಕೆ ಅನಾಹುತವಾದೀತು, ಸರಿಯಾದ ಮಾಹಿತಿಯನ್ನು ನಿಮ್ಮವರ ಕಡೆಯಿಂದ ತರಿಸಿಕೊಳ್ಳಿ.

ಶ್ರೀ ಸಿ. ಚೆನ್ನಿಗಪ್ಪ : ಅಂತಹ ಮಾಹಿತಿ ತಮ್ಮಲ್ಲಿದ್ದರೆ ಕೊಡಿ.....

(ಗೊಂದಲ)

ಅಧ್ಯಕ್ಷರು : ಎಲ್ಲರೂ ಒಟ್ಟಿಗೆ ಎದ್ದುನಿಂತು ಮಾತನಾಡಿದರೆ ಹೇಗೆ? ಈಗ ಎಸ್.ಎಸ್. ಪಾಟೀಲರು ಉಪ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಎಲ್ಲರೂ ಒಟ್ಟಿಗೆ ನಿಂತುಕೊಂಡರೆ ಹೇಗೆ? ನಿಮ್ಮ ಉಪ ಪ್ರಶ್ನೆ ಮುಗಿಯಿತೇ?

(ಗೊಂದಲ)

ಶ್ರೀ ಸಿ. ಚೆನ್ನಿಗಪ್ಪ : ನಮ್ಮ ನಾಯಕರು ಕೇಳುವ ಪ್ರಶ್ನೆ ಸರಿಯಾಗಿದೆ, ಇಲ್ಲವೆಂದಲ್ಲ, ನಮ್ಮ ಮಾಹಿತಿಯ ಪ್ರಕಾರ ಅರಣ್ಯ ಎಲ್ಲಾ ನಾಶವಾಗಿಲ್ಲ, (ಅಡಚಣೆ) ಎಲ್ಲಾ ಆರ್‌ಎಫ್‌ಒಗಳ ಮೀಟಿಂಗ್ ಮಾಡಬೇಕು, ಎಂಎಲ್‌ಎ ಅಧ್ಯಕ್ಷತೆಯಲ್ಲಿ ಕರೆಯಬೇಕು, ಮಾಹಿತಿ ತರಿಸಿಕೊಳ್ಳಬೇಕು, ಡೈರಿ ಮೈನ್‌ಟೇನ್ ಮಾಡುವುದಕ್ಕೆ ಆದೇಶ ಮಾಡಿದ್ದೇನೆ, ನಾನು ಹಾಗೆ ಬಿಟ್ಟಿಲ್ಲ, ವಿಷಯ ಗೊತ್ತಿತ್ತು ಕಳ್ಳತನ ಮಾಡುತ್ತಿದ್ದರು, ಈಗಾಗಲೇ ಸ್ಕ್ವಾಡ್ ಹಾಕಿದ್ದೇವೆ, ಆರು ಕಿ.ಮೀ. ಗೆ poaching ಹಾಕಿದ್ದೇವೆ ಬೆಂಕಿ ಆರಿಸುವುದಕ್ಕೋಸ್ಕರ ಹೊಸ ವೈಜ್ಞಾನಿಕವಾದ ಸಿಸ್ಟಂ ಮಾಡಿದ್ದೇವೆ, ವೈರ್‌ಲೆಸ್ ಸೆಟ್‌ಗಳನ್ನು ಕೊಟ್ಟಿದ್ದೇವೆ, 200 ಜನರನ್ನು ನೇಮಕ ಮಾಡಿದ್ದೇವೆ, 100 ಹೊಸ ಬಂದೂಕುಗಳನ್ನು ತರಿಸಿದ್ದೇವೆ, ಇಷ್ಟೆಲ್ಲಾ ಮಾಡಿದ್ದೇವೆ.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್ : ನಿಮ್ಮಲ್ಲಿ ಅರಣ್ಯ ನಾಶವಾದ ಬಗ್ಗೆ ಅಂಕಿಸಂಖ್ಯೆಯೇ ಇಲ್ಲವೆಂದರೆ ರಾಜ್ಯವನ್ನು ಹೇಗೆ ನಡೆಸುತ್ತೀರಿ? ನಾಳೆ ಪರಿಸ್ಥಿತಿ ವಿಕೋಪಕ್ಕೆ ಹೋದೀತು?

ಅಧ್ಯಕ್ಷರು : ಮಂತ್ರಿಗಳು ಏನೂ ಆಗಿಲ್ಲವೆಂದು ಉತ್ತರವನ್ನು ಕೊಟ್ಟಿದ್ದಾರೆ ಬಿಡಿ, ಉತ್ತರ ಕೊಟ್ಟಿದ್ದಾರೆ ಬಿಡಿ.

ಶ್ರೀ ಎಸ್.ಎಸ್. ಪಾಟೀಲ್ : ನಮ್ಮ ರಾಜ್ಯದಲ್ಲೂ ಕೂಡ ಎಷ್ಟು ಪರ್ಸೆಂಟ್ ಹಾನಿಯಾಗಿದೆ ಎಂಬುದನ್ನು ಹೇಳಬೇಕಾಗುತ್ತದೆ, ಉತ್ತರವೇ ಇಲ್ಲ, ಇಂತಹ ಉತ್ತರವನ್ನು ತೆಗೆದುಕೊಂಡು ಏನು ಮಾಡುವುದು.

ಅಧ್ಯಕ್ಷರು : ಎಸ್.ಎಸ್. ಪಾಟೀಲರೆ, ಅವರು ಅರಣ್ಯ ನಾಶವಾಗಿಲ್ಲವೆಂದು ಉತ್ತರ ಕೊಟ್ಟಿದ್ದಾರೆ, ಪ್ರತಿಯೊಬ್ಬರೂ ಈ ರೀತಿಯಾಗಿ ಕೋರ್ಟ್‌ನಲ್ಲಿ ಆರ್ಗ್ಯುಮೆಂಟ್ ಮಾಡುವಂತೆ ನಿಂತುಕೊಂಡರೆ ಪ್ರಶ್ನೋತ್ತರವನ್ನು ಯಾವಾಗ ನಾನು ಮುಗಿಸುವುದು?

(ಗೊಂದಲ)

ಈ ರೀತಿಯಾದರೆ, ಪ್ರಶ್ನೋತ್ತರವನ್ನು ಮುಗಿಸುವುದಕ್ಕೆ ಸಾಧ್ಯವಾಗುವುದಿಲ್ಲ, ನಿಮ್ಮದೇ ಆದ ವಾದಗಳಿರಬಹುದು, ಆದರೆ ಉಪ ಪ್ರಶ್ನೆಗಳನ್ನು ಒಂದೋ ಎರಡೋ ಕೇಳಿ ಎಂದರೆ, ಎಲ್ಲರೂ ಎದ್ದುನಿಂತುಕೊಂಡು ಈ ರೀತಿಯಾಗಿ ವಾದ ಮಾಡಿದರೆ ಹೇಗೆ? ಬೇರೆ ಸಮಯದಲ್ಲಿ, ಬೇಡಿಕೆಗಳ ಮೇಲೆ ಚರ್ಚೆ ಮಾಡುವಾಗ ಮಾಡಿ, ಬೇಡಿಕೆಗಳ ಮೇಲೆ ವಿವರವಾಗಿ ಮಾತನಾಡಿ, ಈಗ ಈ ಪ್ರಶ್ನೆ ಮುಗಿದಿದೆ ದಯವಿಟ್ಟು ಎಲ್ಲರೂ ಸಹಕರಿಸಬೇಕು. ಮಾನ್ಯ ಸಿದ್ದುಸಾವದಿಯವರು ತಮ್ಮ ಪ್ರಶ್ನೆಯನ್ನು ಕೇಳಿ.

(ಗೊಂದಲ)